**ಊಟದ ಜೊತೆಗೆ ಕೈಯಲ್ಲಿ ರಿಮೋಟ್ ಕೊಟ್ಟರೆ ಮುಗಿತು, ಊಟ ಹೆಂಗಿತ್ತು ಅನ್ನೋದು ಒತ್ತಟ್ಟಿಗಿರಲಿ, ಏನಿತ್ತು ಅನ್ನೋದನ್ನೂ ಗಮನಿಸದೆ ಊಟ ಮುಗಿಸೆದ್ದು ಬಿಡುತ್ತಾನೆ ಮಹಾಶಯ.**

ಸಂಪಾದಿಸಿಕೊಳ್ಳುವುದೇ ಒಂದು ಮುಖ್ಯ ಕೆಲಸವಾಗಿತ್ತು. ಅವತ್ತಿಗೆ ಕಲರ್ ಟೀವಿ ದೇಶದಲ್ಲಿ ಕಾಲಿಟ್ಟು ಐದೇ ವರ್ಷಗಳಾಗಿದ್ದವು. ಟೀವಿಗಳಿದ್ದ ಮನೆಗಳ ಸಂಖ್ಯೆಯೇ ಬೆರಳೆಣಿಕೆಯಷ್ಟಿದ್ದಾಗ, ಇನ್ನು ಕಲರ್ ಟೀವಿ ಎಂಬುದು ಬಹುದೊಡ್ಡ ಲಕ್ಷುರಿ ಆಗಿತ್ತು. ವಾರವಿಡೀ ಆ ಕಂತಿನ ರಾಮಾಯಣದ್ದೇ ಚರ್ಚೆ ಇರುತ್ತಿತ್ತು ಎಲ್ಲೆಂದರಲ್ಲಿ. ಅಮೆರಿಕೆಯ ಐಯೋವಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಫಿಲಿಪ್ ಲುಟ್‌ಗೆಂಡಾರ್ಫ್ ಅಂತೂ ರಾಮಾಯಣದ ಬಗೆಗೇ ಸಂಶೋಧನೆ ಕೈಗೊಂಡರು. "ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ರಾಮಾಯಣವನ್ನು ಜನರಿಗೆ ತಲುಪಿಸುವಲ್ಲಿ ಹೊಸ ಹೊಸ ಮಾಧ್ಯಮಗಳನ್ನು ಬಳಸಲಾಗಿದೆ. ಸಂತ ಕವಿ ತುಳಸೀದಾಸರ ರಾಮಚರಿತಮಾನಸ ಕೃತಿಯಂತೆ ರಮಾನಂದ ಸಾಗರ್ ಅವರ ರಾಮಾಯಣ ಧಾರಾವಾಹಿಯೂ ಈ ನಿಟ್ಟಿನಲ್ಲಿ ನಡೆದ ಮತ್ತೊಂದು ಮುಖ್ಯ ಪ್ರಯೋಗವಾಗಿದೆ. ದಕ್ಷಿಣ ಏಷ್ಯಾದ ಇಷ್ಟೊಂದು ಜನ ಒಂದು ಚಟುವಟಿಕೆಯಲ್ಲಿ ಸಹಭಾಗಿಯಾಗಿರುವುದಕ್ಕೆ ಇತಿಹಾಸದಲ್ಲಿ ಇದಕ್ಕಿಂತ ಇನ್ನೊಂದು ಉದಾಹರಣೆಯಿಲ್ಲ" ಎಂದು ಅಭಿಪ್ರಾಯಪಟ್ಟರು.

ಅದರ ಮರುವರ್ಷ ಬಂದ ಮಹಾಭಾರತ ತಾಂತ್ರಿಕವಾಗಿ ಇನ್ನಷ್ಟು ಮುಂದಿತ್ತಲ್ಲದೆ ಅಷ್ಟು ಹೊತ್ತಿಗೆ ಊರಲ್ಲಿ ಟೀವಿಗಳ ಅದರಲ್ಲೂ ಕಲರ್ ಟೀವಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿತ್ತು. ಪತ್ರಿಕೆಗಳು ಕೂಡ ಆ ಭಾನುವಾರ ಪ್ರಸಾರವಾಗುವ ಕಂತಿನ ಪೂರ್ಣಪಾಠವನ್ನು ತಮ್ಮ ತಮ್ಮ ಪ್ರಾದೇಶಿಕ ಭಾಷೆಗಳಲ್ಲಿ ಶುಕ್ರವಾರವೇ ಪುಟಮಿತಿಯನ್ನು ಲೆಕ್ಕಿಸದೇ ಪ್ರಕಟಿಸಬೇಕಾದಂಥ ಪರೋಕ್ಷ ಒತ್ತಡ ನಿರ್ಮಾಣವಾಗಿತ್ತು. ಎಷ್ಟು ಉಗಿದು ಹೊರಗಟ್ಟಿದರೂ ಮಹಾಪ್ರಸಾದ ಎಂದುಕೊಂಡು ಹಲ್ಲುಕಿರಿಯುತ್ತ ಮತ್ತೆ ಅವೇ ಮನೆಗಳ ಹಜಾರದಲ್ಲಿ ಕಾಲೂರುವಂಥ ದೈನೇಸಿ ಸ್ಥಿತಿಗೆ ಲಕ್ಷಾಂತರ ಕೆಳಮಧ್ಯಮ ಮತ್ತು ಬಡವರ್ಗಗಳ ಕುಟುಂಬಗಳನ್ನು ದೂಡಿದ ಖ್ಯಾತಿ ಈ ಎರಡು ಧಾರಾವಾಹಿಗಳಿಗೇ ಸಲ್ಲಬೇಕು. ಭಾನುವಾರದ ಬೆಳಗಿನ ಹೊತ್ತಲ್ಲಿ ಇಡೀ ದೇಶ ಅಘೋಷಿತ ಕರ್ಫ್ಯೂ ವಿಧಿಸಿದಂತೆ ನಿರ್ಜನವಾಗಿರುತ್ತಿದ್ದುದನ್ನು ಮರೆಯುವಂತೆಯೇ ಇಲ್ಲ. ಟೀವಿ ವೀಕ್ಷಕರ ಸಂಖ್ಯೆ ಮತ್ತು ಟೀವಿ ಸೆಟ್ಟುಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಏರಿಕೆ ಕಂಡುಬಂದಿದ್ದು ಕೂಡ ಆಗಲೇ. ಇದರ ಪರಿಣಾಮ ನಮ್ಮ ಮೇಲೆ ಹೇಗಾಯಿತೆಂದರೆ ಬಿದಿರಿನ ಬಿಲ್ಲುಗಳನ್ನು ಮಾಡಿಕೊಂಡು ಹೆದೆಯೇರಿಸಿಕೊಂಡು ಹೊರಟ ನಾವು ಆಪಿನ ತುದಿಗೆ ಡಾಂಬರು ಮೆತ್ತಿ ಅದರಲ್ಲೊಂದು ಮುಳ್ಳನ್ನು ಚುಚ್ಚಿ, ಹಂದಿಗಳನ್ನು ಓಣಿಓಣಿಗಳಲ್ಲಿ ಅಟ್ಟಾಡಿಸಿಕೊಂಡು ಬೇಟೆಯಾಡಿದೆವು. ಇವತ್ತು ನೆನೆಸಿಕೊಂಡರೆ ಆ ಹಂದಿಗಳು ಅವತ್ತು ಬಿ.ಆರ್. ಚೋಪ್ರಾಗೆ ಎಷ್ಟು ಶಾಪ ಹಾಕಿರಬಹುದೆಂದು ಆಲೋಚನೆಯಾಗುತ್ತೆ!

ಕೇಬಲ್ ಟೀವಿ ವ್ಯವಸ್ಥೆ ಬಂದುದೇ ನಿಧಾನವಾಗಿ ಟೀವಿಯ ಚಹರೆಯೇ ಬದಲಾಗಿಬಿಟ್ಟಿತು. ಸದ್ದಿಲ್ಲದೆ ಪ್ರತಿ ಗೃಹವೂ ಒಂದು ಸಿನಿಮಾಗೃಹವಾಗಿ ಬದಲಾಗಿಬಿಟ್ಟಿತು. ಇದರ ಹೊಡೆತ ತಾಳದೆ ಝೀ, ಡಿಡಿ ಮೆಟ್ರೋ, ಸ್ಟಾರ್ ಮೂವೀಸ್ ಹೀಗೆ 'ಭರಪೂರ ಮನರಂಜನೆ'ಗೆಂದೇ ಬಗೆಬಗೆಯ ಟೀವಿ